ಶ್ರೀ ಎಂ. ಬಿ. ರಾಮಸ್ವಾಮಿ.—ಹಾಲು ಸರಬರಾಯಿ ಮಾಡುವಾಗ ಅನೇಕ ಜನ ಸಪ್ಲೈ ಮಾಡತಕ್ಕವರು ಹಾಲಿಗೆ ಬೇರೆ ರಸವನ್ನು ಬೆರಸಿ ಸಪ್ಲೈ ಮಾಡುತ್ತಿದ್ದಾರೆ. ಇದರಲ್ಲಿ ಚೆಕ್ಕಿಕಲ್ ಅಸಿಸ್ಟೆಂಟ್ ಮತ್ತು ಡೈರಿಯಲ್ಲಿರತಕ್ಕ ಅಧಿಕಾರಿಗಳಿಗೆ ಸಂಬಂಧ ಇದೆ. ಇದರ ಬಗ್ಗೆ ತನಿಖೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್—ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ,

ಶ್ರೀ ಹಂಪಿ ಶಿವಣ್ಣ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಮೃತಮಹಲ್ ಜಖೀನು ವಿಪರೀತ ವಾಗಿದೆ. ಇತ್ತೀಚೆಗೆ ಕಾವಲುದಾರರು ಆ ಜಖೀನನ್ನು ಉಸಯೋಗಿಸುತ್ತಿದ್ದಾರೆ. ಸರ್ಕಾರ ದವರು ಮನಸ್ಸು ಮಾಡಿದರೆ ಹಾಲು ಅಭಿವೃದ್ಧಿಯಾಗುತ್ತದೆ ಮತ್ತು ತಳಿ ಅಭಿವೃದ್ಧಿಯಾಗುತ್ತದೆ, ಆದುದರಿಂದ ಆ ಜಖೀನಿಗೆ ತಕ್ಕ ಬಂದೋ ಬಸ್ತು ಮಾಡುವ ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಯೋಗ್ಯವಾದಂಥ ಸ್ಕೀಮನ್ನು ಅನ್ವಯಿಸುವಾಗ ಇದು ಅದರಲ್ಲಿ ಅಡಕವಾಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಹಾಲು ಉತ್ಪಾದನೆ ಮಾಡುವ ನೆವದಿಂದ ಅಮೃತ್‌ಮಹಲ್ ತಳಿ ಮತ್ತು ಜಖೀನನ್ನು ಬಡ ರೈತರಿಗೆ ಕೊಡುತ್ತಿದ್ದಾರೆ. ಹಿಂದೆ ನಾಲ್ಕು ಲಕ್ಷ ಎಕರೆ ಇದ್ದುದು ಈಗ ಐವತ್ತೈದು ಸಾವಿರ ಎಕರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಮೃತಮಹಲ್ ದನಗಳು ೨೦ಸಾವಿರ ಇದ್ದು ಈಗ ಎರಡು ಸಾವಿರಕ್ಕೆ ಇಳಿದಿವೆ. ಅದನ್ನು ತಡೆಗಟ್ಟುವುದಕ್ಕೆ ಇನ್ನು ಮುಂದೆ ಒಂದು ಇಂಚು ಭೂಮಿ ಕೊಡುವುದಿಲ್ಲ ಎಂದು ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ರೆವಿನ್ಯೂ ಮಿನಿಸ್ಟರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಕೃತಕ ಗರ್ಭಧಾರಣಾ ಕೇಂದ್ರಗಳು 15 ಎಲ್ಲೆಲ್ಲಿವೆ, ಎಂದು ಕೇಳಿದ್ದಕ್ಕೆ ಅಜ್ಜಂಪುರ ಮತ್ತು ಇತರ ಕಡೆಗಳಲ್ಲಿ ಎಂದು ಹೇಳಿದ್ದೀರಿ. ಯಾವ ಯಾವ ಕಡೆ ಇದ್ದಲ್ಲಿ ಇವೆ? ಅಜ್ಜಂಪುರದಲ್ಲಿ ಇರುವ ತಳಿ ಅಭಿವೃದ್ಧಿ ಕೇಂದ್ರ ಮತ್ತು ಕೇವಿಲೇಪ್ ಸ್ಕೀಮ್‌ಗಳಿಂದ ಏನೂ ಪ್ರಯೋಜನ ಆಗುತ್ತಾ ಇಲ್ಲ. ಇವೆ ಯಶಸ್ವಿಯಾಗಿ ನಡೆಯುವುದಕ್ಕೆ ಸರ್ಕಾರದವರು ಒಂದು ದಿಟ್ಟ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್ —ಈ ಕೇಂದ್ರಗಳು ಎಲ್ಲೆಲ್ಲಿ ಇವೆ ಎಂದು ಕೇಳಿದರು. ಈ ಕೇಂದ್ರಗಳು ಎಲ್ಲಿ ಇವೆ ಎಂದು ನನ್ನಲ್ಲಿ ಲಿಸ್ಟ್ ಇಲ್ಲ. ಒಂದು ತಳಿ ಅಭಿವೃದ್ಧಿ ಕೇಂದ್ರ ಅಜ್ಜಂಪುರದಲ್ಲಿ ಇದೆ ಎಂದು ಹೇಳಿದೆ 15 ಕೃತಕ ಗರ್ಭಧಾರಣಾ ಕೇಂದ್ರಗಳು ಚಿಕ್ಕಮಗಳೂರಿನಲ್ಲಿ ಇವೆ, ಆವು ಎಲ್ಲೆಲ್ಲಿ ಇವೆ ಎಂಬುದಕ್ಕೆ ಮತ್ತೊಂದು ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

MID-DAY MEALS

147. Sri M. M. SAJJAN (Muddebihal) :—

Will the Minister of State for Primary and Secondary Education be pleased to state :—

(*a*) the quantum of Central assistance received to provide Mid-day Meals during the years 1970-71, 1971-72, 1972-73 ;

(*b*) the kind of associations and institutions serving Mid-day Meals ;

(*c*) the institutions or departments receiving grants to serve Mid-day Meals to children and students ;

(*d*) whether the Government is aware that grant sanctioned to provide Mid-day Meals is misused or mis-appropriated

(*e*) if so, the steps taken by Government for the proper utilisation of grant meant for this purpose ;

(*f*) whether Government has constituted committees consisting of the M.L.A. Tahsildar, Assistant Education Officer and four non-officials of each taluk to ensure that midday meals are provided to the students in Government schools regularly, during each year of 1968-69, 1970-71, 1971-72, 1972-73 ?

Smt. E. E. VAZ (Minister of State for Primary and Secondary Education).—

(*a*) Nil.

(*b*) Mid-day Meals are served in Primary Schools, Nursery Schools and Balawadis.

(*c*) Primary Schools, Nursery Schools and Balawadis having Mid-day Meal centres are paid incidental charges and cook-*cum*-aya charges.

(*d*) A few such instances have come to the notice of Government.

(*e*) Disciplinary action is taken against officials concerned under the C.C.A. Rules.

(*f*) The constitution of a broad based committee is under consideration.

Sri M. M. SAJJAN.—In answer to (*c*) it is stated that incidental charges are being paid. I want to know whether the charges are being paid directly to the Prefectors of each Institute ?

†Smt. E. E. VAZ.—Payment is made at Rs. 2 as incidental charges to the beneficiaries out of which 50 paise are paid by the State Government. one rupee is supposed to be met by the Taluk Boards. or Panchayats and the remaining 50 paise is to be recovered from the local public as contribution.

Sri M. M. SAJJAN.—In answar to (*d*) you have stated that a few instances of misappropriations have come to the notice of the Government. Are there any convictions ?

Smt. E. E. VAZ.—There have been a few cases, for example, action has been taken in the case of 10 persons who have indulged in mal-practices and every effort is made to recover the misused amount from those persons.

ಶ್ರೀ ಜೆ. ಎಲ್. ಕಬಾಡಿ.—ಈತ.ರದಲ್ಲಿ ಸಂದರ್ಭಗಳು ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಸರ್ಕಾರದ ಗಮನಕ್ಕೆ ಬಂದಾಗ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆಯೋ ಎಂತಹ ಶಿಸ್ತಿನ ಕ್ರಮ ತೆಗೆದುಕೊಂಡಿದ್ದೀರಾ ಕೇಸ್ ಹಾಕಲಿಕ್ಕೆ ಹೇಳಿದ್ದೀರಾ, ಅಥವಾ departmental action ತೆಗೆದುಕೊಂಡಿದ್ದೀರಾ ?

ಶ್ರೀಮತಿ ಇ. ಇ. ವಾಜ್.—ಡಿಪಾರ್ಟ್‌ಮೆಂಟಲ್ ಆ್ಯಕ್ಷನ್ ತೆಗೆದುಕೊಳ್ಳುತ್ತಾ ಇದ್ದೇವೆ. ಈಗಾಗಲೇ 10 ಜನರ ಮೇಲೆ ಕ್ರಮ ತೆಗೆದುಕೊಂಡು ದುರುಪಯೋಗ ಮಾಡಿದ ಪೊತ್ತವನ್ನು ಅಧಿಕಾರಿಗಳ ಸಂಬಳದಿಂದ ವಸೂಲು ಮಾಡುವ ಏರ್ಪಾಟು ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ.—ಇತ್ತೀಚೆಗೆ ಕೋಲಾರ ತಾಲ್ಲೂಕಿನಲ್ಲಿ ನಡೆದಿರುವುದು ತಮ್ಮ ಉತ್ತರದಲ್ಲಿ ಸೇರಿದೆಯೇ ?

ಶ್ರೀಮತಿ ಇ. ಇ. ವಾಜ್.—ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದು ವಿಚಾರಣೆ ಆಗುತ್ತಾ ಇದೆ.

Sri M. M. SAJJAN.—I reply to (e) it is stated that disciplinary action will be taken against the officials concerned. My I know who are those officials and what steps have been taken against them?

ಶ್ರೀಮತಿ ಇ. ಇ. ವಾಜ್.—ಬೇರೆ ಪ್ರಶ್ನೆ ಹಾಕಿದರೆ ವಿವರ ಕೊಡಬಹುದು.

ಶ್ರೀ ಕೆ. ಎನ್. ವೀರಪ್ಪಗೌಡ.—ಮಿಡ್-ಡೇ-ಮೀಲ್ಸ್ ಇವನ್ನು ನಿಗಾ ಇಟ್ಟುನೋಡಿಕೊಳ್ಳುವುದಕ್ಕೆ ಡಿಪಾರ್ಟ್‌ಮೆಂಟ್ ಕಮಿಟೀಸ್ ಇವೆ, ಅವುಗಳೇ ಅನ್ಯಾಯ ಮಾಡಿದ ಮೇಲೆ ಅವುಗಳಿಗೆ ಅವಕಾಶ ಕೊಡುವುದು ಒಳ್ಳೆಯದು ಅಲ್ಲ

ಶ್ರೀಮತಿ ಇ. ಇ. ವಾಜ್.—ಇದರ ಜವಾಬ್ದಾರಿಯನ್ನು ಸ್ಕೂಲ್ ಡಿಪಾರ್ಟ್‌ಮೆಂಟ್ ಕಮಿಟಿಗೆ ಕೊಟ್ಟಿದ್ದೇವೆ ತಾಲ್ಲೂಕ್ ಬೋರ್ಡಿನಲ್ಲಿ ಬೇರೆ ನೋಡಿಕೊಳ್ಳುವುದಕ್ಕಾಗಿ ಸರ್ಕಾರದವರು ಪರಿಶೀಲಿಸುತ್ತಿದ್ದಾರೆ.

ಶ್ರೀ ಬಿ. ಇ. ರಾಮಯ್ಯ — ಈ)ಗೆ ಉತ್ತರವಾಗಿ ಅಂಥ ಕೆಲವು ಸಂದರ್ಭಗಳು ಸರ್ಕಾರದವರ ಗಮನಕ್ಕೆ ಬಂದಿವೆ ಎಂದು ಹೇಳಿದ್ದೀರಿ ತಾಲ್ಲೂಕ್ ಲೆವಲ್‌ನಲ್ಲಿ ಕಮಿಟಿ ಮಾಡುವುದಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀಮತಿ ಇ.ಇ. ವಾಜ್.—ಈಗಾಗಲೇ ಸರ್ಕಾರಕ್ಕೆ ಪ್ರಪೋಜಲ್ಸ್ ಬಂದಿದೆ ಯಾವ ನಮೂನೆಯಲ್ಲಿ ಮಾಡಬೇಕು, ಯಾವ ರೀತಿ ಕಮಿಟಿ ಫಾರಂ ಮಾಡಬೇಕು ಎಂದು ಸಧ್ಯದಲ್ಲಿಯೇ ನಿರ್ಧಾರ ತೆಗೆದುಕೊಂಡು ಅದನ್ನು ವಿಚಾರ ಮಾಡುವುದು ಇದೆ.

ಶ್ರೀ ಸಿ. ಬೈರೇಗೌಡ.—ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಮೂಲಕ ನಡೆಸುತ್ತಾ ಇರತಕ್ಕಂಥ ಶಿಶುವಿಹಾರದ ಮಕ್ಕಳಿಗೆ ಮಿಡ್ ಡೇ ಮೀಲ್ಸ್ ಒದಗಿಸುವ ವ್ಯವಸ್ಥೆ ಮಾಡಿದೆ, ದುರುಪಯೋಗ ಆಗುತ್ತಿದೆಂದು ಒಪ್ಪಿಕೊಂಡಿದ್ದೀರಿ, ಎಷ್ಟು ಕಡೆ ಆ ರೀತಿ ದುರುಪಯೋಗವಾಗುತ್ತಿದೆಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀಮತಿ ಇ. ಇ. ವಾಜ್ —ಶಿಶುವಿಹಾರಗಳು, ಪ್ರಾಥಮಿಕ ಶಾಲೆಗಳಿಗೆ ಅನ್ವಯಿಸುವ ಲೆಕ್ಕವಿದೆ.

Regular Schools		7,08375
Pre-primary School Children	...	3,88587
Total	...	10,96962

ದುರುಪಯೋಗವಾಗಿರುವ ಕಡೆ ಸರ್ಕಾರದವರು ಸೂಕ್ತ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಕೇಂದ್ರ ಸರ್ಕಾರದವರು ಮಿಡ್ ಡೇ ಮೀಲ್ಸ್‌ಗೆ ಧನ ಸಹಾಯ ಮಾಡುತ್ತಿಲ್ಲ ಎಂದು ಹೇಳುತ್ತಿದ್ದೀರಿ ರಾಜ್ಯಸರ್ಕಾರ ಈ ವಿವನ ಎಷ್ಟು ಹಣ ಖರ್ಚು ಮಾಡುತ್ತಿದೆ? ಇದರಿಂದ ಎಷ್ಟು ಮಕ್ಕಳಿಗೆ ಪ್ರಯೋಜನವಾಗುತ್ತಿದೆ ಎಂಬುದನ್ನು ದಯವಿಟ್ಟು ತಿಳಿಸಿ.

ಶ್ರೀಮತಿ ಇ. ಇ. ವಾಜ್.—3ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು 331/3 ಭಾಗದಷ್ಟಿನ ಎಕ್ಸ್‌ಪೆಂಡಿಚರ್ ಸಹಾಯ ಕೊಡುತ್ತಿದ್ದರು. ಆದರೆ 4ನೇ ಪ್ಲಾನ್‌ನಲ್ಲಿ ಯಾವ ಸಹಾಯವನ್ನು ಕೊಟ್ಟಿಲ್ಲ. ರಾಜ್ಯಸರ್ಕಾರದವರೇ ಕೊಡುತ್ತಿದ್ದಾರೆ, ಇದರಲ್ಲಿ ಈಗ ಆಯಾ ಕಮ್ ಅಟೆಂಡರ್‌ಗೆ 2 ಲಕ್ಷ ರೂಪಾಯಿ ಪ್ರತ್ಯೇಕ ಎಕ್ಸ್‌ಪೆಂಡೀಚರ್‌ಗೆ 45 ಲಕ್ಷ ರೂ.ಗಳನ್ನು 1973-74 ನೇ ಬಡ್ಜೆಟ್‌ನಲ್ಲಿ ಏರ್ಪಾಡು ಮಾಡಿದೆ.

ಶ್ರೀ ವಿ. ಕೃಷ್ಣರಾವ್.—ಮಿಡ್ ಡೇ ಮೀಲ್ಸ್ ವಿಚಾರದಲ್ಲಿ ಉಪಾಧ್ಯಾಯರು ಮಿಡ್ ಡೇ ಮೀಲ್ಸ್ ಅವರೇ ಮಾಡುತ್ತಿರುವುದರಿಂದ ಶಾಲೆಯ ಪಾಠಪ್ರವಚನಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗೆ ಸರ್ಕಾರಕ್ಕೆ ಬಂದಿದ್ದ ಪಕ್ಷದಲ್ಲಿ ಅದಿಗೆ ಮಾಡುವುದಕ್ಕೆ ವ್ಯವಸ್ಥೆ ಏನಾದರೂ ಮಾಡುತ್ತೀರಾ? ಉಪಾಧ್ಯಾಯರು ಅಲ್ಲದೆ ಬೇರೆಯವರನ್ನು ನೇಮಕ ಮಾಡುವ ಯೋಚನೆ ಸರ್ಕಾರದಲ್ಲಿದೆಯೇ?

ಶ್ರೀಮತಿ ಇ. ಇ. ವಾಜ್.—ದುರುಪಯೋಗ ವಾಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡುವುದಕ್ಕೆ ಡಿಪಾರ್ಟ್‌ಮೆಂಟ್ ಕಮಿಟಿ ಇದೆ ಅದೇರೀತಿ ತಾಲ್ಲೂಕ್ ಕಮಿಟಿಗಳನ್ನು ಮಾಡುವ ಏರ್ಪಾಡು ಸರ್ಕಾರದವರು ಮಾಡಿದ್ದಾರೆ. ಆಯಾ ಕಂ ಕುಕ್ ಚಾರ್ಜ್‌ಸ್ ಕೊಡುತ್ತೇವೆ. ಅವರು ಆ ಕೆಲಸವನ್ನು ನೋಡಿಕೊಳ್ಳಬೇಕು ಇದರಲ್ಲಿ ಮಕ್ಕಳ ಪೋಷಕರ ಜವಾಬ್ದಾರಿನೂ ಇದೆ. ದುರುಪಯೋಗವಾಗುತ್ತಿದೆ ಎಂದು ಈ ಸದನದಲ್ಲಿ ತೆಗೆದುಕೊಂಡು ಬಂದು ಹೇಳಿದರೆ ಪ್ರಯೋಜನವಿಲ್ಲ. ಪೋಷಕರೇ ಅಲ್ಲಿ ಸರಿಯಾಗಿ ಉಪಾಧ್ಯಾಯರು ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎಂದು ನೋಡತಕ್ಕಂಥ ಸ್ವಲ್ಪ ಜವಾಬ್ದಾರಿಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.—ಹಳ್ಳಿಗಳಲ್ಲಿ ಡಿಪಾರ್ಟ್‌ಮೆಂಟಲ್ ಕಮಿಟಿಗಳನ್ನು ಮಾಡಿದ್ದೀರಿ. ಆ ಕಮಿಟಿಯವರೇ ಮಿಡ್ ಡೇ ಮಿಲ್ಸ್‌ನ್ನು ದುರುಪಯೋಗ ಮಾಡಿಕೊಂಡು ಅವರೇ ಉಪಯೋಗಿಸುತ್ತಾ ಇರುವುದನ್ನು ಸರ್ಕಾರದವರ ನಜರಿಗೆ ಬಂದಿದೆಯೇ? ಇದರ ಬಗ್ಗೆ ಪೊಲೀಸ್ ಕೇಸುಗಳು ಏನು ಇಂಡಗಿ ತಾಲ್ಲೂಕಿನಲ್ಲಿ ಆಗಿರುವುದು ಗಮನಕ್ಕೆ ಬಂದಿದೆಯೇ?

ಶ್ರೀಮತಿ ಇ. ಇ. ವಾಜ್.—ಬೇಳಲಯೇ ಎದ್ದು ಹೊಲವನ್ನು ಮೇಯುತ್ತಿರುವಾಗ ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇದು ಡಿಪಾರ್ಟ್‌ಮೆಂಟ್‌ನವರ ಕೆಲಸ ಅವರು ಇದನ್ನು ನೋಡಿಕೊಳ್ಳಬೇಕು, ಇದರ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ ಉತ್ತರ ಕೊಟ್ಟಿದ್ದೇನೆ, ಹಾಗೆಯೇ ಮಾನ್ಯ ಸದಸ್ಯರು ಜವಾಬ್ದಾರಿಯನ್ನು ವಹಿಸಬೇಕು.

Sri M. M. SAJJAN.—May I know whether Government is aware that the malpractices or misuse of such mid-day meals, amount to offences under the Indian Penal Code? As such, I wish to know whether cases have been lodged against the offenders.

Smt.. E. E. VAZ.—Departmental action is taken. Sometimes their increments are stopped. Whatever disciplinary action is possible is taken and will be taken.

CONSTRUCTION OF RURAL ROADS IN SAGAR TALUK

163. Sri KAGODU THIMMAPPA (Sagar).—

Will the Minister for Public Works and Electricity be pleased to state:—

(*a*) whether it has come to the notice of the Government that the rural roads taken up during the year 1972-73 in Sagar taluk have not been completed so far;